## ಪೋಷಕ ಪಾಠ – ೫

# ಜನಪದ ಒಗಟುಗಳು

**ಸಂಗ್ರಹ**

ಜನಪದ ಬೆಡಗಿನ ಒಗಟುಗಳಲ್ಲಿ ಪ್ರಶ್ನೆಗೆ ಉತ್ತರಿಸುವ ಮತ್ತು ಪದ್ಯದಲ್ಲಿಯೇ ಎದುರಾಳಿಗೆ ಮತ್ತೊಂದು ಒಗಟನ್ನು ಒಡ್ಡುವ ಕ್ರಮ ವೈಶಿಷ್ಟ್ಯಪೂರ್ಣವಾದದ್ದು. ಕೊಟ್ಟಿರುವ ಉದಾಹರಣೆಗಳಿಂದ ಇದನ್ನು ಆಸ್ವಾದಿಸಬಹುದು.

**ಒಗಟು ೧ :** "ಕೈಯುಂಟು ಕಾಲಿಲ್ಲ ಶಿರಹರಿದ ಮುಂಡ
ಮೈಯೊಳಗೆ ನವಗಾಯ ಒಂಬತ್ತು ತುಂಡ
ಒಯ್ಯನೊಯ್ಯನೇ ಬಂದು ಹೆಗಲೇರಿಕೊಂಡ
ರಾಯ ರಾಯರಿಗೆಲ್ಲ ತಾನೇ ಪ್ರಚಂಡ"

ಉತ್ತರ: "ನೀನು ಹೇಳಿದ ಬೆಡಗು 'ಅಂಗಿ' ಕಾಣಣ್ಣಾ
ನಾನೊಂದ ಬೆಡಗ ಹೇಳುವೆನು ಕೇಳಣ್ಣಾ"

**ಒಗಟು ೨ :** "ಅಂಗೈಯ ಕೊಟ್ಟರೆ ಮುಂಗೈಯ ನುಂಗುವುದು
ಸಿಂಗಳುಕನಲ್ಲ ಶಿವಬಲ್ಲ । ಬೆಡಗೀನ
ಜಾಣೆ ಕನ್ನಡವಾ ತಿಳಿದ್ಹೇಳೆ"

ಉತ್ತರ: "ಕನ್ನಡವ ಹೇಳಲಿಕೆ ಇನ್ನಾವ ಸೋಜಿಗವು
ಪನ್ನಂಧರನಾ ಶಿವಬಲ್ಲ। ನ್ಯಾರೋರ
ಕುಪ್ಪಸಲ್ಲವೇನೇ ಹಸೆಯವಳೆ"

**ಒಗಟು ೩ :** "ನೀರಲ್ಲೆ ಹುಟ್ಟೋದು ನೀರಲ್ಲೆ ಬೆಳಿಯೋದು
ನೀರು ತಾಕಿದರೆ ಮಟಮಾಯ। ಕನ್ನಡದ
ಬೆಡಗೀನ ಜಾಣೆ ತಿಳಿದ್ಹೇಳೆ"

ಉತ್ತರ: "ಕನ್ನಡವ ಹೇಳಲಿಕೆ ಇನ್ನಾವ ಸೋಜಿಗವು
ಪನ್ನಂಧರನಾ ಶಿವಬಲ್ಲ । ತಿನ್ನುವ
ಉಪ್ಪಲ್ಲವೇನು ಅರಸರೆ"

**ಒಗಟು ೪ :** "ಹಿತ್ತಲ್ಲಿ ಹುಟ್ಟೋದು ಹೊತ್ತು ನೀರ ಹುಯ್ಯೋದು
ಅದು ಒಂದು ಗಿಡದ ಪರಿಕಾರ– ಎಲೆಬಾಲೆ
ಬಾಲೆ ನಮ್ಮರ್ಥ ಒಡೆದ್ಹೇಳೆ"

© KTBS not to be republished

ಉತ್ತರ : "ನಿಮ್ಮ ಅರ್ಥವು ನಮ್ಮೀಗೆ ತಿಳಿಯಾವು
ನೀವಾಡಿದ ಮಾತು ಹುಸಿಯಲ್ಲ– ಮಾಶಿವನೆ
ಹಿತ್ಲವರೆ ಹೂವ ಅರಸೋರು"

**ಒಗಟು ೫ :** "ಕೆಸರಲ್ಲಿ ಹುಟ್ಟೋದು ಕೆಸರಲ್ಲಿ ಬೆಳೆಯೋದು
ಅದು ಒಂದು ಗಿಡದ ಪರಿಕಾರ–ಎಲೆಬಾಲೆ
ಬಾಲೆ ನಮ್ಮರ್ಥ ಒಡೆದ್ಹೇಳಿ."

ಉತ್ತರ: "ನಿಮ್ಮ ಅರ್ಥವು ನಮ್ಮೀಗೆ ತಿಳಿಯಾವು
ನೀವಾಡಿದ ಮಾತು ಹುಸಿಯಲ್ಲ– ಮಾಶಿವನೆ
ತಾವರೆ ಬೇರ ಅರಸೋರು"

**ಒಗಟು ೬ :** "ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು
ಹೋಗೋರ ಮುಂಜೆರಗ ಹಿಡಿಯೋದು–ಎಲೆಬಾಲೆ
ಬಾಲೆ ಇದರರ್ಥ ಒಡೆದ್ಹೇಳಿ"

ಉತ್ತರ: "ನಿಮ್ಮ ಅರ್ಥವು ನಮ್ಮೀಗೆ ತಿಳಿಯಾವು
ನೀವಾಡಿದ ಮಾತು ಹುಸಿಯಲ್ಲ– ಮಾಶಿವನೆ
ಉತ್ತರಾಣಿ ಗಿಡ ಅರಸೋರು"

**ಒಗಟು ೭ :** "ಹೊಲದಲ್ಲಿ ಹುಟ್ಟೋದು ಹೊಲದಲ್ಲಿ ಬೆಳೆಯೋದು
ಉಳುವಾನ ಕಂಡು ನಗುವುದು– ಎಲೆಬಾಲೆ
ಬಾಲೆ ನಮ್ಮರ್ಥ ಒಡೆದ್ಹೇಳಿ"

ಉತ್ತರ: "ನಿಮ್ಮ ಅರ್ಥವು ನಮ್ಮೀಗೆ ತಿಳಿಯಾವು
ನೀವಾಡಿದ ಮಾತು ಹುಸಿಯಲ್ಲ–ಮಾಶಿವನೆ
ಗರಕೇಯ ಹುಲ್ಲ ಅರಸೋರು"

**ಒಗಟು ೮ :** "ಕಲ್ಲಲ್ ಕುಕ್ಕೂದಲ್ಲ ನೀರಲ್ ಸೆಳೆವುದಲ್ಲ
ಎಲ್ಲೆಲ್ಲೂ ಕಂಡ್ರೂ ಮಡಿವಸ್ತ್ರ – ಅಂಬಲ್‌ಹಾಡು
ಜಾಣೆ ಕನ್ನಡವ ತಿಳಿದ್ಹೇಳು"

ಉತ್ತರ: "ಕನ್ನಡದ ಹಾಡನ್ನು ಹನ್ನೆಯ್ಡು ನಾಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಕೊಕ್ಕ್ಹುಕ್ಕಿ ಮೇಲೆ ಅರ್ತುಂಟಾ?"

**ಒಗಟು ೯ :** "ತಂದಿ ಮದಿಗ್ಹೋಪ್ದಲ್ಲ ತಾಯ್ಮನಿಗೆ ಹೋಪ್ದಲ್ಲ
ಮುಂದದು ಧಾರಿ ಮೂರುತಕ – ಅಂಬಲ್‌ಹಾಡು
ಜಾಣೆ ಕನ್ನಡವ ತಿಳಿದ್ಹೇಳು"

© KTBS not to be republished

ಉತ್ತರ: "ಕನ್ನಡದ ಹಾಡನ್ನು ಹನ್ನೆಯ್ಡು ನಾಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಸಂಪ್ಗಿ ಹೂಗಿನ ಮುಂದೆ ಅರ್ತುಂಟಾ?"

**ಒಗಟು ೧೦ :** "ದರಿಯ ಮ್ಯಾಲ್ ಹುಟ್ಟುವುದು ದೊರಿಯಾಗಿ ಬೆಳೆವುದು
ಅರಮನೆಗುತ್ತರವ ಕೊಡುವುದು – ಅಂಬಲ್‌ಹಾಡು
ಜಾಣಿ ಕನ್ನಡವ ತಿಳಿದ್ಹೇಳು"

ಉತ್ತರ: "ಕನ್ನಡದ ಹಾಡನ್ನು ಹನ್ನೆಯ್ಡು ನಾಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಹನಿಮರನಲ್ದೆ ಅರ್ತುಂಟಾ?"

**ಒಗಟು ೧೧ :** "ಹಸಿಹಸಿಯ ಬೀಳೆ ಮಸಿಯ ಬಣ್ಣದ ಬೀಳೆ
ಬಿಸಿನೀರ ಹಾಕಿ ಸಲಗುವಿ – ಅಂಬಲ್‌ಹಾಡು
ಜಾಣಿ ಕನ್ನಡವ ತಿಳಿದ್ಹೇಳು"

ಉತ್ತರ: "ಕನ್ನಡದ ಹಾಡನ್ನು ಹನ್ನೆಯ್ಡು ನಾಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ತಲೆಕುರ್ಲಲ್ದೆ ಅರ್ತುಂಟಾ?"

**ಒಗಟು ೧೨ :** "ಬಗಲಲ್ಲಿ ಕುಕ್ಕುವುದು ಬಾಯಲ್ಲಿ ತಿಂಬೂದು
ನಂಗ್ಹೇಳಿ ಅರ್ತು ಈ ಹಾಡಿನ – ಹೇಳ್ದಿರೆ
ಕೈಗೆ ಹಲ್‌ಮುರ್ದು ಕೊಡುವೆನು"

ಉತ್ತರ: "ಕನ್ನಡದ ಹಾಡನ್ನು ಹನ್ನೆಯ್ಡು ನಾಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಬೀಸುಕಲ್ಲಲ್ದೆ ಅರ್ತುಂಟಾ?"

**ಪದ–ಅರ್ಥ**

ನ್ಯಾರೋರ–ನಾರಿಯರ, ಮಡಿವಸ್ತು–ಬಿಳಿಬಟ್ಟೆ, ಕೊಕ್ನಕ್ಕಿ–ಕೊಕ್ಕರೆ, ಮೂರುತಕ–ಮುಹೂರ್ತಕ್ಕೆ, ಹನಿಮರ–ತಾಳೆಮರ, ತಲೆಕುರ್ಲು–ತಲೆಕೂದಲು.

**ಅಭ್ಯಾಸ**

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು–ಎರಡು ವಾಕ್ಯಗಳಲ್ಲಿ ಉತ್ತರಿಸಿ.**

೧. ಒಂದನೆಯ ಒಗಟಿನ ಉತ್ತರ 'ಅಂಗಿ' ಎಂಬುದನ್ನು ಸಮರ್ಥಿಸಿರಿ.

೨. ಎರಡನೆಯ ಒಗಟಿಗೆ 'ಕುಪ್ಪಸ'ವು ಉತ್ತರ ಎಂಬುದನ್ನು ಹೇಗೆ ಹೇಳುವಿರಿ?

೩. ಐದನೆಯ ಒಗಟಿಗೆ 'ತಾವರೆ ಬೇರು' ಎಂಬುದು ಉತ್ತರ –ಹೇಗೆ?

೪. ಎಂಟನೆಯ ಒಗಟಿನ ಉತ್ತರ 'ಕೊಕ್ಕರೆ' ಎಂಬುದನ್ನು ಸಮರ್ಥಿಸಿ

೫. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?

* * * * *

© KTBS not to be republished